# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 53 ಕಾರ್ಯಕ್ರಮ – 2 "ರೇಷ್ಮೆ ಗೂಡು (Cocoon Bank) ಬ್ಯಾಂಕ್‌ಗಳ ಸ್ಥಾಪನೆ" ಕುರಿತು.

**ಓದಲಾಗಿದೆ:**

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋಜನೆ/ ಪಿಎಸ್.1/ಹೊಕಾ-ಕು.ಬ್ಯಾಂಕ್/4/2016-17, ದಿನಾಂಕ 13/20-04-2016 ಮತ್ತು 27/29-06-2016.

**ಪ್ರಸ್ತಾವನೆ:**

2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-53 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ:

**ರೇಷ್ಮೆ ಗೂಡು (Cocoon Bank) ಬ್ಯಾಂಕ್‌ಗಳ ಸ್ಥಾಪನೆ, ಕ್ರಮೇಣ ರೈತ ಉತ್ಪಾದನ ಸಂಘ (ಎಫ್‌ಪಿಓ)ಗಳ / ಸಮುದಾಯ ಕೇಂದ್ರಗಳ ಮೂಲಕ ಒದಗಿಸಲಾಗುವುದು. ಇದಕ್ಕಾಗಿ 2 ಕೋಟಿ ರೂ. ಗಳ ಅನುದಾನ.**

ಮೇಲೆ ಓದಲಾದ ದಿನಾಂಕ 13/20-04-2016 ಮತ್ತು 27/29-06-2016ರ ಪತ್ರಗಳಲ್ಲಿ, ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಗೂಡು ಮಾರಾಟಕ್ಕೆ ಬಂದಾಗ, ವಾತಾವರಣದ ವೈಪರೀತ್ಯದಿಂದ ಹಾಗೂ ಇತರೆ ಸಂದರ್ಭಗಳಲ್ಲಿ ರೇಷ್ಮೆ ಗೂಡಿನ ದರ ಒಮ್ಮೆಲೆ ಕುಸಿದಾಗ, ರೇಷ್ಮೆ ಬೆಳೆಗಾರರು ಸಂಕಷ್ಟವನ್ನು ಎದುರಿಸುತ್ತಾರೆ. ರೇಷ್ಮೆ ಗೂಡುಗಳನ್ನು ಚಂದ್ರಿಕೆಗಳಿಂದ ಬಿಡಿಸಿದ ನಂತರ 3-4 ದಿನಗಳ ಒಳಗಾಗಿ ಮಾರಾಟ ಮಾಡಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಚಿಟ್ಟೆ ಗೂಡನ್ನು ಕೊರೆದು ಹೊರಬರುತ್ತದೆ. ಇಂತಹ ಚಿಟ್ಟೆ ಕೊರೆದ ಗೂಡಿನಿಂದ ರೇಷ್ಮೆ ನೂಲು ಬಿಚ್ಚಾಣಿಕೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ರೇಷ್ಮೆ ಬೆಳೆಗಾರರು ಗೂಡಿನ ಧಾರಣೆ ಕುಸಿದಾಗ ಉತ್ತಮ ದರ ಅಪೇಕ್ಷಿಸಿ ಗೂಡನ್ನು ಹೆಚ್ಚಿನ ದಿನಗಳವರೆಗೆ ಕಾಯ್ದಿರಿಸಲು ಸಾಧ್ಯವಿರದ ಕಾರಣ ಅಂದಿನ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ಮಾರಾಟ ಮಾಡಬೇಕಾಗುವ ಪರಿಸ್ಥಿತಿ ಉಂಟಾಗುತ್ತದೆ. ಇದರಿಂದ ರೇಷ್ಮೆ ಬೆಳೆಗಾರರಿಗೆ ನಷ್ಟ ಉಂಟಾಗುತ್ತದೆ.

ರೇಷ್ಮೆ ಗೂಡಿನ ಆವಕ ಹೆಚ್ಚಾದಾಗ ಧಾರಣೆಗಳಲ್ಲಿ ಕುಸಿತ ತಡೆಯಲು ಹಾಗೂ ಇತ್ತರೇ ಸಂಧರ್ಭಗಳಲ್ಲಿ ಗೂಡಿನ ಆವಕ ಕಡಿಮೆಯಾಗಿ ಧಾರಣೆಗಳಲ್ಲಿ ಹೆಚ್ಚಳ ಕಂಡು ಬರುವುದನ್ನು ತಡೆಯಲು ಹಾಗೂ ಧಾರಣೆಯಲ್ಲಿ ಸ್ಥಿರತೆ ತರಲು ಕಕೂನ್ ಬ್ಯಾಂಕಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಸೌಲಭ್ಯವು ಜಾರ್ಖಂಡ್, ಉತ್ತರಖಂಡ್ ಮತ್ತು ಜಮ್ಮು-ಕಾಶ್ಮೀರದಲ್ಲಿ ಪ್ರಸ್ತುತ ಪ್ರಚಲಿತದಲ್ಲಿದ್ದು, ರೈತರ ಗೂಡಿಗೆ ಉತ್ತಮ ಬೆಲೆ ಸಿಗುವಲ್ಲಿ ಸಹಕಾರಿಯಾಗಿವೆ.

ರೇಷ್ಮೆ ಗೂಡು, ಕಚ್ಚಾ ರೇಷ್ಮೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ತಂತ್ರಗಾರಿಕೆ ಕುರಿತು ಪರಿಶೀಲಿಸಲು ಕೃಷಿ ಅರ್ಥಶಾಸ್ತ್ರ ಪ್ರೊಫೆಸರ್ ಡಾ|| ಹೆಚ್.ಬಸವರಾಜ್ ಇವರ ನೇತೃತ್ವದ ತಾಂತ್ರಿಕ ಸಮಿತಿ ವರದಿಯ ಶಿಫಾರಸ್ಸನಂತೆ ಉತ್ಪಾದನಾ ವೆಚ್ಚ ಆಧರಿಸಿ ರೇಷ್ಮೆ ಗೂಡುಗಳ ವರ್ಗೀಕರಣದ ಅನ್ವಯ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಲಾಗುವುದು. ಕನಿಷ್ಠ ಬೆಂಬಲ ಬೆಲೆ ನಿಗಧಿ ಪಡಿಸಲು ಒಂದು ಸಮಿತಿಯನ್ನು ರಚಿಸಲಾಗುವುದು. ಕಾಲಕಾಲಕ್ಕೆ ಉತ್ಪಾದನಾ ವೆಚ್ಚವನ್ನು ಆಧರಿಸಿ ಕನಿಷ್ಠ ಬೆಂಬಲ ಬೆಲೆಯನ್ನು ಸದರಿ ಸಮಿತಿಯು ಪರಿಷ್ಕರಿಸುವುದು. ನಿಗದಿತ ಬೆಂಬಲ ಬೆಲೆಯಲ್ಲಿ ರೇಷ್ಮೆ ಗೂಡನ್ನು ಖರೀದಿಸಿ, ಒಣಗಿಸಿ ಶೇಖರಿಸುವುದು ಹಾಗೂ ಗೂಡಿನ ದರ ಉತ್ತಮಗೊಂಡಾಗ ಅಥವಾ ಗೂಡಿಗೆ ಬೇಡಿಕೆ ಹೆಚ್ಚಾಗಿ ಆವಕ ಕಡಿಮೆಯಾದಂತಹ ಸಂದಂರ್ಭಗಳಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿದೆ. ಒಣಗಿದ ಗೂಡುಗಳನ್ನು 6 ತಿಂಗಳ ಒಳಗಾಗಿ ಮರು ಮಾರಾಟ ಮಾಡಬೇಕು. ಇದರಿಂದ ರೇಷ್ಮೆ ಗೂಡಿನ ಧಾರಣೆಗಳಲ್ಲಿ ಸ್ಥಿರತೆ ತರಬಹುದಾಗಿದೆ.

ಈ ವ್ಯವಸ್ಥೆಯನ್ನು FPO/ಸಮುದಾಯ ಕೇಂದ್ರಗಳ ಮೂಲಕ ಕಾರ್ಯನಿರ್ವಹಿಸಬಹುದಾಗಿರುತ್ತದೆ. ಕಕೂನ್ ಬ್ಯಾಂಕ್ ಸ್ಥಾಪಿಸಿ ಕಾರ್ಯನಿರ್ವಹಿಸಲು FPOಗಳಿಗೆ ಆರ್ಥಿಕ ನೆರವು ಒದಗಿಸಲಾಗುವುದು. FPOಗಳು ರೇಷ್ಮೆ ಉದ್ದಿಮೆಯ ಆಗುಹೋಗುಗಳನ್ನು ಪರಿಗಣಿಸಿ ರೇಷ್ಮೆ ನೂಲು ಬಿಚ್ಚಾಣಿಕೆದಾರರ

ಮು.ತಿ.ನೋ. . . . .

ಅವಶ್ಯಕತೆಗೆ ಅನುಗುಣವಾಗಿ ಒಣಗಿದ ರೇಷ್ಮೆ ಗೂಡುಗಳನ್ನು ಮರು ಮಾರಾಟ ಮಾಡಲು ಕ್ರಮವಹಿಸುವುದು. ಸಮಿತಿಯು ಒಣಗಿದ ರೇಷ್ಮೆ ಗೂಡು ಮಾರಾಟ ಮಾಡಲು ನಿಗದಿ ಪಡಿಸುವ ದರದಲ್ಲಿ FPOಗಳು ಮಾರಾಟ ಮಾಡಬೇಕಾಗುತ್ತದೆ. ಗೂಡಿನ ಮರು ಮಾರಾಟದ ಬೆಲೆಯು ಕನಿಷ್ಠ ಬೆಂಬಲ ಬೆಲೆಗೆ ಸರಿ ಸಮ ಅಥವಾ ಹೆಚ್ಚಿರಬೇಕು. ಪ್ರಾರಂಭಿಕವಾಗಿ ಎರಡು ಕಕೂನ್ ಬ್ಯಾಂಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿಸ್ತೃತ ಮಾರ್ಗಸೂಚಿಯನ್ನು ಹೊರಡಿಸಬೇಕಾಗುತ್ತದೆ ಎಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಪ್ರಸ್ತಾಪಿಸಿರುತ್ತಾರೆ.

ರೇಷ್ಮೆ ಗೂಡಿನ ದರ ಒಮ್ಮೆಲೆ ಕುಸಿದಾಗ, ರೇಷ್ಮೆ ಬೆಳೆಗಾರರಿಗೆ ಇದರಿಂದ ಆಗುವ ತೊಂದರೆಗಳ ನಿವಾರಣೆಗೆ ಬೆಲೆ ಕುಸಿತದ ಸಂದರ್ಭಗಳಲ್ಲಿ ರೇಷ್ಮೆ ಗೂಡನ್ನು ಖರೀದಿಸಿ ಒಣಗಿಸಿ ಶೇಖರಿಸುವುದು ಹಾಗೂ ಗೂಡಿನ ದರ ಉತ್ತಮಗೊಂಡಾಗ ಮಾರಾಟ ಮಾಡುವ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿದೆ. ಇದರಿಂದ ರೇಷ್ಮೆ ಬೆಳೆಗಾರರಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುತ್ತದೆ. ರೇಷ್ಮೆ ಗೂಡಿನ ದರದಲ್ಲಿ ಸ್ಥಿರತೆ ತರುವುದು, ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ನಿರಂತರ ರೇಷ್ಮೆ ಗೂಡನ್ನು ಲಭ್ಯಗೊಳಿಸುವುದು ಈ ಯೋಜನೆಯ ಉದ್ದೇಶ ಮತ್ತು ಗುರಿಯಾಗಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ತುಮಕೂರು ಜಿಲ್ಲೆ ಪಾವಗಡದಲ್ಲಿ ರೈತ ಉತ್ಪಾದಕ ಸಂಘವನ್ನು ಸ್ಥಾಪಿಸಲಾಗುತ್ತಿದೆ. ಈ ರೈತ ಉತ್ಪಾದಕ ಸಂಘದ ಮೂಲಕ ಕಕೂನ್ ಬ್ಯಾಂಕ್ ಸ್ಥಾಪಿಸಲು ಉದ್ದೇಶಿಸಿದೆ. ತುಮಕೂರು ಜಿಲ್ಲೆಯಲ್ಲಿ 4576 ರೇಷ್ಮೆ ಬೆಳೆಗಾರರ ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿದ್ದು, ಪಾವಗಡ ತಾಲ್ಲೂಕಿನಲ್ಲಿ ಹೆಚ್ಚಿನ ಮಟ್ಟದಲ್ಲಿ ದ್ವಿತಳಿ ಗೂಡು ಉತ್ಪಾದನೆಯನ್ನು ಮಾಡಲಾಗುತ್ತಿದೆ. ಉತ್ಪಾದಿಸಲಾದ ದ್ವಿತಳಿ ಗೂಡನ್ನು ಒಣಗಿಸಿ ರೇಷ್ಮೆ ಬೆಳೆಗಾರರು ಅವಶ್ಯಕತೆಗೆ ಅನುಗುಣವಾಗಿ ಕಕೂನ್ ಬ್ಯಾಂಕ್‌ನಲ್ಲಿ ಶೇಕರಿಸಬಹುದಾಗಿರುತ್ತದೆ. ರೈತ ಉತ್ಪಾದಕ ಸಂಘಗಳು ರೇಷ್ಮೆ ಗೂಡನ್ನು ಒಣಗಿಸಿ ಕಕೂನ್ ಬ್ಯಾಂಕ್‌ನಲ್ಲಿ ಶೇಕರಣೆ ಮಾಡಲು ತಗಲುವ ವೆಚ್ಚವನ್ನು ರೇಷ್ಮೆ ಬೆಳೆಗಾರರಿಂದ ಪಡೆಯಬೇಕಾಗಿರುತ್ತವೆ. ರೈತ ಉತ್ಪಾದಕ ಸಂಘಗಳು ನಡೆಸುವ ಕಕೂನ್ ಬ್ಯಾಂಕ್‌ಗೆ ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿಗಳು ಮತ್ತು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ ಹಾಗೂ ಕೇಂದ್ರ ರೇಷ್ಮೆ ಮಂಡಳಿಯ ವಿಜ್ಞಾನಿಗಳು ತಾಂತ್ರಿಕ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಾರೆ.

ಕಕೂನ್ ಬ್ಯಾಂಕ್ ಸ್ಥಾಪನೆಗೆ ಮೂಲಭೂತವಾಗಿ ಬೇಕಿರುವ ಅವಶ್ಯಕತೆಗಳೆಂದರೆ ಗೂಡುಗಳನ್ನು ಒಣಗಿಸುವ ಓವನ್, ಶೇಖರಣಾ ಕಟ್ಟಡ ಮತ್ತು ಇತರೆ ಸಲಕರಣೆಗಳು. ಗೂಡು ಬ್ಯಾಂಕ್ ಸ್ಥಾಪಿಸಲು ಬೇಕಾಗುವ ವ್ಯವಸ್ಥೆ – 200 ಮೆ.ಟನ್ ಗೂಡು ಶೇಖರಿಸಲು 15000-16000 ಚ.ಅಡಿ ವಿಸ್ತೀರ್ಣದ ಕಟ್ಟಡ, 10 ಮೆ.ಟನ್ ಸಾಮರ್ಥ್ಯದ ಹಾಟ್ ಏರ್ ಡ್ರೈಯರ್ ಮತ್ತು ಗೂಡು ಶೇಖರಿಸುವ ವ್ಯವಸ್ಥೆ ಉಗ್ರಾಣದಲ್ಲಿ ಹವಾಮಾನ ನಿಯಂತ್ರಿಸುವ ಉಪಕರಣಗಳು, ಗೂಡು ಒಣಗಿಸುವ ಮತ್ತು ಶೇಖರಣಾ ವ್ಯವಸ್ಥೆಯ ಉಪಕರಣಗಳ ಅವಶ್ಯಕತೆ ಇರುತ್ತದೆ. ಈ ಮೂಲಭೂತ ಸೌಕರ್ಯಗಳನ್ನು ಪ್ರಾರಂಭಿಕವಾಗಿ ಇಲಾಖೆಯಿಂದ ಒದಗಿಸಲಾಗುವುದು, ನಂತರದ ದಿನಗಳಲ್ಲಿ ರೈತ ಉತ್ಪಾದಕ ಸಂಘಗಳು ಕಕೂನ್ ಬ್ಯಾಂಕ್‌ಗಳನ್ನು ನಡೆಸಬೇಕಾಗಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರೂ. 200.00 ಲಕ್ಷಗಳ ಅವಶ್ಯಕತೆ ಇದ್ದು, ಈ ಯೋಜನೆಯ ವೆಚ್ಚವನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು 2851-00-107-1-48 ರಡಿ ಒದಗಿಸಿರುವ ರೂ. 8473.00 ಲಕ್ಷಗಳಿಂದ ಭರಿಸಬಹುದೆಂದು ತಿಳಿಸುತ್ತಾ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಆದೇಶ ಹೊರಡಿಸುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಮೇರೆಗೆ ರೇಷ್ಮೆ ಗೂಡು **(Cocoon Bank)** ಬ್ಯಾಂಕ್‌ಗಳ ಸ್ಥಾಪನೆ ಹಾಗೂ ರೈತ ಉತ್ಪಾದಕ ಸಂಘ (ಎಫ್‌ಪಿಓ)ಗಳ /

ಪು.ತಿ.ನೋ. . . .

ಸಮುದಾಯ ಕೇಂದ್ರಗಳ ಮೂಲಕ ಒದಗಿಸಲಾಗುವ ಹೊಸ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಲುವಾಗಿ ಕಕೂನ್ ಬ್ಯಾಂಕ್‌ನ್ನು ತುಮಕೂರು ಜಿಲ್ಲೆ, ಪಾವಗಡದಲ್ಲಿ ಸ್ಥಾಪಿಸಲು ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ರೂ. 200.00 ಲಕ್ಷಗಳನ್ನು ಪ್ರಸಕ್ತ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು 2851-00-107-1-48 ರಡಿ ಒದಗಿಸಿರುವ ರೂ. 8473.00 ಲಕ್ಷಗಳಿಂದ ಭರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ತೋಇ 88 ರೇಕೃವಿ 2016,**
**ಬೆಂಗಳೂರು, ದಿನಾಂಕ : 20-07-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಮೇರೆಗೆ ರೇಷ್ಮೆ ಗೂಡು (**Cocoon Bank**) ಬ್ಯಾಂಕ್‌ಗಳ ಸ್ಥಾಪನೆ ಹಾಗೂ ರೈತ ಉತ್ಪಾದಕ ಸಂಘ (ಎಫ್‌ಪಿಓ)ಗಳ /ಸಮುದಾಯ ಕೇಂದ್ರಗಳ ಮೂಲಕ ಒದಗಿಸಲಾಗುವ ಹೊಸ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಲುವಾಗಿ ಕಕೂನ್ ಬ್ಯಾಂಕ್‌ನ್ನು ತುಮಕೂರು ಜಿಲ್ಲೆ, ಪಾವಗಡದಲ್ಲಿ ಸ್ಥಾಪಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ರೂ. 200.00 ಲಕ್ಷಗಳನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು 2851-00-107-1-48 ರಡಿ ಒದಗಿಸಿರುವ ರೂ. 8473.00 ಲಕ್ಷಗಳಿಂದ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 21 ಎಫ್‌ಆರ್‌ಓ 2016, ದಿನಾಂಕ 05-07-2016 ರ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 319 ವೆಚ್ಚ-4/2016, ದಿನಾಂಕ 16-06-2016 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಲ್. ಚಿನ್ನಮ್ಮ 20/7
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ 1 & 2, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಹಿರಿಯ ನಿರ್ದೇಶಕರು/ನಿರ್ದೇಶಕರು, ಯೋಜನಾ ಇಲಾಖೆ, ಯೋಜನಾ ಸಂಯೋಜನಾ ಮತ್ತು ಮಾಹಿತಿ ವಿಭಾಗ/ಪಿ.ಎಫ್.ಆರ್. ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.